

ಗಣೇಶ್ ಅರಳೀಕಟ್ಟಿ

# ದೇಶಪ್ರೇಮ

ರಾಜಸ್ತಾನದ ಮಹಾ ರಾಣಾಪ್ರತಾಪ ಅಪ್ರತಿಮ ದೇಶಪ್ರೇಮಿ. ಯುದ್ಧದಲ್ಲಿ ಅಕ್ಬರನ ಅಪಾರ ಸೈನ್ಯದ ಎದುರು ಕೆಚ್ಚೆದೆಯಿಂದ ಕಾದಾಡಿದ. ಕೊನೆಗೆ ಆತನಿಗೆ ಸೆರೆ ಸಿಕ್ಕದೆ ಕಾಡಿನಲ್ಲಿ ಮರೆಯಾದ. ಅಕ್ಬರನ ಸೈನಿಕರು ಅವನನ್ನು ಹುಡುಕಲು ಶತ ಪ್ರಯತ್ನ ಮಾಡಿದರೂ ಅವರ ಕೈಗೆ ಸಿಗಲಿಲ್ಲ. ಹಲವಾರು ದಿನಗಳವರೆಗೆ ಊಟ, ನಿದ್ದೆಯಿಲ್ಲದೇ ಹೆಂಡತಿ, ಮಕ್ಕಳೊಂದಿಗೆ ಕಾಡು ಮೇಡು ಅಲೆದಾಡಿದ.

ಕೆಲವು ರಜಪೂತ ರಾಜರು ರಾಣಾಪ್ರತಾಪನಿಗೆ ಮಾನಸಿಂಹನ ಮೂಲಕ ಸಂದೇಶವನ್ನು ಕಳಿಸಿದರು. ಸುಮ್ಮನೆ ಅನಾಥನಂತೆ ಕಾಡು ಮೇಡುಗಳಲ್ಲಿ ಅಲೆದಾಡುವುದರಿಂದ ಕಷ್ಟ ಅನುಭವಿಸಬೇಕಾಗುತ್ತದೆ. ಅದಕ್ಕಿಂತ ಅಕ್ಬರ ಮಹಾರಾಜರ ಕ್ಷಮೆ ಕೇಳಿದರೆ, ಅವರು ಕ್ಷಮಿಸಿ ರಾಜ್ಯವನ್ನು ಮರಳಿ ಕೊಟ್ಟರೂ ಕೊಡಬಹುದು. ಅದರಿಂದ ಸುಖವಾಗಿಯಾದರೂ ಇರಬಹುದು ಎಂದು ಬರೆಯಲಾಗಿತ್ತು.

ಸಂದೇಶವನ್ನು ಓದಿದ ಮಹಾ ರಾಣಾಪ್ರತಾಪನು ಕ್ರೋಧದಿಂದ ಕೆಂಡವಾದನು. ಸ್ವಾಭಿಮಾನ ಎಲ್ಲಕ್ಕಿಂತ ದೊಡ್ಡದು. ನಾನು ನನಗಿಂತ ಹಿರಿಯರಲ್ಲಿ, ಸಜ್ಜನರಲ್ಲಿ ಕ್ಷಮೆ ಕೇಳುತ್ತೇನೆ. ಮಾತೃಭೂಮಿಯನ್ನು ಕಬಳಿಸುತ್ತಿರುವ, ಇಂಥ ಶತ್ರುಗಳ ಕ್ಷಮೆ ಕೇಳುವುದು ರಜಪೂತ ರಾಜರಿಗೆ ಶೋಭಿಸುವಂತದ್ದಲ್ಲ. ಮಾತೃಭೂಮಿಯ ರಕ್ಷಣೆಗಾಗಿ ವಿದೇಶಿಯರೊಂದಿಗೂ ಯುದ್ಧ ಮಾಡುತ್ತೇನೆ. ಕ್ಷಮೆ ಕೇಳಬೇಕಾದವರು ನಾವಲ್ಲ, ನಿನ್ನ ಅಕ್ಬರ್. ಯಾವ ತಪ್ಪಿಲ್ಲದೇ ಬೇರೆ ರಾಜ್ಯದ ಮೇಲೆ ನಿನ್ನ ಅಕ್ಬರ್ ಆಕ್ರಮಣ ಮಾಡಿದ್ದಾನೆ. ಅಕ್ಬರನಂಥ ರಾಜ್ಯ ವಿಸ್ತರಣಾಕಾಂಕ್ಷಿಯಲ್ಲಿ ನಾನು ಕ್ಷಮೆಯನ್ನು ಕೇಳುವುದಿಲ್ಲ. ಅದು ಉಚಿತವೂ ಅಲ್ಲ. ಸ್ವಾಭಿಮಾನ ಕಳೆದುಕೊಂಡು ಬದುಕುವುದಕ್ಕಿಂತ ರಜಪೂತ ರಾಜರು ಸಾವನ್ನೇ ಪ್ರೀತಿಸುತ್ತಾರೆ ಎಂದನು. ಮಹಾ ರಾಣಾಪ್ರತಾಪನ ವೀರೋಚಿತ ನುಡಿಗಳನ್ನು ಕೇಳಿ ಮಾನಸಿಂಹ ತಲೆ ತಗ್ಗಿಸಿದ.

■ ಪ್ರಕಾಶ ಎಸ್. ಮನ್ನಂಗಿ

# ನಮ್ಮೂರ ಜಾತ್ರೆ

ನಮ್ಮ ಊರ ಜಾತ್ರೆ ಎಂದ್ರೆ
ಎಂಥ ಸಡಗರ
ಹೆಜ್ಜೆ ಮಜಲು, ಡೊಳ್ಳು ಕುಣಿತ
ಭಾರಿ ಅಬ್ಬರ
ಬಾಳೆ ದಿಂಡು, ತೆಂಗು ಗರಿ
ಕಟ್ಟಿ ತೇರಿಗೆ
ಬಣ್ಣ ಬಣ್ಣ ಹೂವು ಮಾಲೆ
ಮುಡಿಸಿ ದೇವಿಗೆ
ಮಿರ್ರನೆಂದು ಮಿಂಚುತಿರುವ
ಹೊನ್ನ ಕಳಸವು
ಪರಿಪರಿಯ ಕಿರುಪತಾಕೆ
ಕಣ್ಣ ಸೆಳೆವವು
ಬಾಳೆ ಬೋರೆ ಹಣ್ಣುಗಳನು
ರಥಕೆ ಎಸೆವರು
ಭವ್ಯ ಮೂರ್ತಿ ಒಳಗೆ ಇರಿಸಿ
ಕೈಯ ಮುಗಿವರು
ಊರ ಭಕ್ತರೆಲ್ಲ ಸೇರಿ
ತೇರ ಎಳೆವರು
ಭಕ್ತಿಭಾವದಲ್ಲಿ ಮಿಂದು
ಹಾಡಿ ಕುಣಿವರು
ಎಲ್ಲ ಮನೆಯ ಬಾಗಿಲಲ್ಲಿ
ಹಸಿರು ತೋರಣ
ಅಂಗಳಲ್ಲಿ ರಂಗವಲ್ಲಿ
ಹುಗ್ಗಿ ಹೂರಣ
ಜಾತ್ರೆ ಅಂಗವಾಗಿ ವಿವಿಧ
ಸ್ಪರ್ಧೆ ನಡೆವವು
ಬಯಲು ಕುಸ್ತಿ, ಯಕ್ಷಗಾನ
ಮನವ ಸೆಳೆವವು
ಚಿಕ್ಕ ಮಕ್ಕಳಂತು ಕುಣಿದು
ಖುಷಿಯ ಪಡುವರು
ಆಟಿಕೆಯಾ ಲೋಕದಲ್ಲಿ
ಮೈಯ ಮರೆವರು
ನಮ್ಮ ಊರ ಜಾತ್ರೆ ಎಂದ್ರೆ
ನಮಗೆ ಸಂಭ್ರಮ
ಹೆಮ್ಮೆಯಿಂದ ಹೇಳುತ್ತಿಹೆವು
ಮನಸು ಸರಿಗಮ

■ ಅಮೃತೇಶ್ವರ ತಂಡರ

